# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | **783** |
| ಸದಸ್ಯರ ಹೆಸರು | **ಶ್ರೀ ಎಸ್.ನಾಗರಾಜ್ (ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)** |
| ಉತ್ತರಿಸುವ ದಿನಾಂಕ: | **26-07-2019** |
| ಉತ್ತರಿಸುವ ಸಚಿವರು: | **ಲೋಕೋಪಯೋಗಿ ಸಚಿವರು** |

| ಕ್ರಮ ಸಂಖ್ಯೆ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ಹೆಗ್ಗಡದೇವನಕೋಟೆ ಹ್ಯಾಂಡ್‌ಪೋಸ್ಟ್- ಎನ್.ಬೇಗೂರು ರಸ್ತೆ, ಸರಗೂರು ಬಿದರಹಳ್ಳಿ ರಸ್ತೆಗಳು ಹದಗೆಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಭಾಗಶಃ ದುಸ್ಥಿತಿಯಲ್ಲಿರುವುದು |
| ಆ) | ಹೆಚ್ಚು ಸಾರ್ವಜನಿಕ ವಾಹನಗಳ ಓಡಾಟ ಇರುವ ಈ ರಸ್ತೆಗಳನ್ನು ಕೂಡಲೇ ಅಭಿವೃದ್ಧಿಪಡಿಸಲು ಕ್ರಮ ತೆಗೆದುಕೊಳ್ಳಲಾಗುವುದೇ; ಈ ರಸ್ತೆಗಳ ಅಭಿವೃದ್ಧಿಗೆ ಪ್ರಸಕ್ತ ಸಾಲಿನಲ್ಲಿ ಅನುದಾನ ಒದಗಿಸಲಾಗಿದೆಯೇ? ಹಾಗಿದ್ದಲ್ಲಿ (ವಿವರಗಳನ್ನು ನೀಡುವುದು) | • ಹೆಗ್ಗಡದೇವನಕೋಟೆ ಹ್ಯಾಂಡ್‌ಪೋಸ್ಟ್‌ನಿಂದ ಎನ್-ಬೇಗೂರ್‌ವರೆಗೆ ಸಂಪರ್ಕ ಕಲ್ಪಿಸುವ ರಸ್ತೆಯು ರಾಮನಾಥಪುರ-ತೆರಕಣಾಂಬಿ (ರಾಜ್ಯ ಹೆದ್ದಾರಿ-86) ಹ್ಯಾಂಡ್ ಪೋಸ್ಟ್ ಸರಪಳಿ (84.69 ರಿಂದ 94.60 ಕಿ.ಮೀ) ನಿಂದ ಸರಗೂರಿನವರೆಗೆ ಮತ್ತು ಸರಗೂರಿನಿಂದ ಬಿದರಹಳ್ಳಿ ಸರ್ಕಲ್ ಮಾರ್ಗ ಎನ್ ಬೇಗೂರ್‌ಗೆ (ಸರಪಳಿ 0.00 ರಿಂದ 7.00 ಕಿ.ಮೀ) ಸಂಪರ್ಕ ಕಲ್ಪಿಸುವ ಜಿಲ್ಲಾ ಮುಖ್ಯ ರಸ್ತೆಯಾಗಿರುತ್ತದೆ.<br>• ರಾಮನಾಥಪುರ-ತೆರಕಣಾಂಬಿ ರಸ್ತೆಯ ಹೆಚ್.ಡಿ.ಕೋಟೆ ಹ್ಯಾಂಡ್ ಪೋಸ್ಟ್‌ನಿಂದ ಸರಗೂರುವರೆಗಿನ ರಾಜ್ಯ ಹೆದ್ದಾರಿಯ 9.91 ಕಿ.ಮೀ ರಸ್ತೆಯು (84.69 ರಿಂದ 94.60 ಕಿ.ಮೀ) ಸುಸ್ಥಿತಿಯಲ್ಲಿರುತ್ತದೆ.<br>• ಸರಗೂರುನಿಂದ ಬಿದರಹಳ್ಳಿವರೆಗಿನ ರಸ್ತೆಯು ಸರಪಳಿ 0.00 ರಿಂದ 7.00 ಕಿ.ಮೀ ವರೆಗೆ ಒಟ್ಟು 7.00ಕಿಮೀ. ಉದ್ದವಿರುತ್ತದೆ. ಇದರಲ್ಲಿ<br>  • ಸರಪಳಿ 0.00 ರಿಂದ 0.75 ಕಿ.ಮೀ ವರೆಗಿನ ರಸ್ತೆಯು ಸುಸ್ಥಿತಿಯಲ್ಲಿರುತ್ತದೆ<br>  • ಸರಪಳಿ 0.75 ರಿಂದ 1.60 ಕಿ.ಮೀ.ವರೆಗೆ ರಸ್ತೆಯು ಹಾಳಾಗಿದ್ದು, ಅಭಿವೃದ್ಧಿಪಡಿಸಬೇಕಾಗಿರುತ್ತದೆ.<br>  • ಸರಪಳಿ 1.60 ರಿಂದ 4.25ಕಿ.ಮೀ.ವರೆಗೆ 2018-19ನೇ ಸಾಲಿನ ಅಪೆಂಡಿಕ್ಸ್-ಇ ಯೋಜನೆಯಡಿ ರೂ.310.00ಲಕ್ಷಗಳಿಗೆ ಅನುದಾನ ದೊರೆತಿದ್ದು, ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿದ್ದು, ಕಾರ್ಯಾದೇಶವನ್ನು |

| ಕ್ರಮ ಸಂಖ್ಯೆ | ಪ್ರಶ್ನೆಗಳು | ಉತ್ತರಗಳು |
| --- | --- | --- |
| | | ನೀಡಲಾಗಿರುತ್ತದೆ.<br>• ಸರಪಳಿ 4.25 ನಿಂದ 7.00 ಕಿ.ಮೀ ವರೆಗಿನ ರಸ್ತೆಯು ಸುಸ್ಥಿತಿಯಲ್ಲಿರುತ್ತದೆ<br>• ಬಿದರಹಳ್ಳಿ ವೃತ್ತದಿಂದ ಎನ್.ಬೇಗೂರುವರೆಗಿನ ರಸ್ತೆಯು ಸರಪಳಿ 0.00 ರಿಂದ 13.00 ಕಿ.ಮೀ ವರೆಗೆ ಒಟ್ಟು 13.00ಕಿ.ಮೀ. ಉದ್ದವಿರುತ್ತದೆ. ಇದರಲ್ಲಿ<br>• ಸರಪಳಿ 0.00 ರಿಂದ 1.30ಕಿ.ಮೀ.ವರೆಗಿನ ರಸ್ತೆಯು ಸುಸ್ಥಿತಿಯಲ್ಲಿರುತ್ತದೆ.<br>• ಸರಪಳಿ 1.30 ರಿಂದ 8.20 ಕಿ.ಮೀ.ವರೆಗೆ, 9.60 ರಿಂದ 11.50 ಕಿ.ಮೀ.ವರೆಗೆ ಮತ್ತು 12.00 ರಿಂದ 13.00 ಕಿ.ಮೀ.ವರೆಗೆ ಒಟ್ಟು 9.80 ಕಿ.ಮೀ. ಉದ್ದದ ರಸ್ತೆಯನ್ನು ಎಸ್.ಹೆಚ್.ಡಿ.ಪಿ. ಯೋಜನೆಯಡಿ ಅಭಿವೃದ್ಧಿಪಡಿಸಲು ಉದ್ದೇಶಿಸಲಾಗಿದೆ<br>• ಸರಪಳಿ 8.20 ರಿಂದ 9.60 ರವರೆಗೆ ಹಾಗೂ ಸರಪಳಿ 11.50 ರಿಂದ 12.00ಕಿ.ಮೀ.ವರೆಗೆ ಒಟ್ಟು 1.90ಕಿ.ಮೀ. ಉದ್ದದ ರಸ್ತೆಯನ್ನು ಅಭಿವೃದ್ಧಿಪಡಿಸಲು 2018-19ನೇ ಸಾಲಿನ ಅಪೆಂಡಿಕ್ಸ್-ಇ ಯೋಜನೆಯಡಿ ರೂ.200.00 ಲಕ್ಷಗಳಿಗೆ ಅನುಮೋದನೆ ದೊರೆತಿದ್ದು (ಬದಲಿ ಕಾಮಗಾರಿ), ಅಂದಾಜು ಪಟ್ಟಿ ತಯಾರಿಸುವ ಹಂತದಲ್ಲಿರುತ್ತದೆ. |

ಲೋಇ 23 ಸಿಕ್ಯೂಎಸ್ 2019(ಇ)

(ಗೋವಿಂದ ಕಾರಜೋಳ)
ಉಪ ಮುಖ್ಯಮಂತ್ರಿಗಳು ಹಾಗೂ
ಲೋಕೋಪಯೋಗಿ ಸಚಿವರು